ಮುಂಜಾವು

ವಾರಪತ್ರಿಕೆ.

ಸಂಪಾದಕ: ಸುರಿಬೈಲು ನಾಗರಾಜ್

ರಿಜಿಸ್ಟರ್ಡ್ ನಂ. ಕೆಆರ್ಎನ್ಎಸ್ — ೧೯

ಸಂಪುಟ ೧ ಸಂಚಿಕೆ ೯ ಕೊಪ್ಪ ೧೭-೧೧-೮೩ ಭಾನುವಾರ ಬೆಲೆ ೨೦ ಪೈಸೆ

ನಮ್ಮ ಪತ್ರಿಕೆಯ ಕಚೇರಿ

ನಮ್ಮ ಪತ್ರಿಕೆಯ ಕಚೇರಿ ಹಾಗೂ ಅಚ್ಚುಕೂಟವನ್ನು ಶಿಲ್ಕ್ ರಸ್ತೆ (ಕಾಫಿ ಬೋರ್ಡ್ ಕಚೇರಿ ಇರುವ ರಸ್ತೆ) ಯ ೨೨ (ಬಿ) ನಂಬರಿನ ಮನೆಯಲ್ಲಿ ತೆರೆದಿದ್ದೇವೆ. (ಪಾರಿವಸ್ ಟೆಕ್ಸ್‌ಟೈಲ್ಸ್ ಹಿಂಭಾಗ.) **ಸಂಪಾದಕರನ್ನು ಭೇಟಿ ಮಾಡುವ ಸಮಯ: ಬೆಳಿಗ್ಗೆ ೧೧-೩೦ ರಿಂದ ಸಂಜೆ ೪-೦೦ ಗಂಟೆವರೆಗೆ ಮಾತ್ರ.**

ಅನಿವಾರ್ಯ ಕಾರಣಗಳಿಂದ ಈ ವಾರದ ಪತ್ರಿಕೆ ಎರಡೇ ಪುಟಗಳಲ್ಲಿ ಪ್ರಕಟ ವಾಗುತ್ತಿರುವುದಕ್ಕೆ ವಿಷಾದಿಸುತ್ತೇವೆ.

—ಸಂಪಾದಕ.

ಬೇಗಾರು ಸೇತುವೆ ರಿಪೇರಿ ಕೆಲಸ ಶುರು

ಕೊಪ್ಪ: ಜಖಂ ಆಗಿರುವ ಬೇಗಾರು ಸೇತುವೆಯ ರಿಪೇರಿಗಾಗಿ ೨೧ ಸಾವಿರ ರೂ. ಅಂದಾಜು ವೆಚ್ಚದ ಯೋಜನೆ ಮಂಜೂರಾಗಿದ್ದು, ಕಾಮಗಾರಿ ವಹಿಸಿಕೊಂಡಿರುವ ಚಿಕ್ಕಮಗಳೂರಿನ ಶಕ್ತಿ ಬಿಲ್ಡರ್ಸ್ ಸಂಸ್ಥೆ ಇದೇ ಸೋಮವಾರದಿಂದ ಕೆಲಸ ಪ್ರಾರಂಭಿಸುವುದೆಂದು ಕೊಪ್ಪ ಲೋಕೋಪಯೋಗಿ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಕೆ. ವಿ. ವೆಂಕಟಯ್ಯ 'ಮುಂಜಾವು' ಗೆ ತಿಳಿಸಿದ್ದಾರೆ.

ಸೇತುವೆಯ ಮಧ್ಯಭಾಗದಲ್ಲಿ ಕೆಳಗಿನಿಂದ ಇನ್ನೊಂದು ಕುಂದ ಕಟ್ಟಿ ಸೇತುವೆ ಮೇಲಿನ ತಗಡುಗಳನ್ನು ತೆಗೆದು ಕಾಂಕ್ರೀಟ್ ಹಾಕುವಂತೆ ಚೀಫ್ ಇಂಜಿನಿಯರ್ ರವರು ಇಲ್ಲಿನ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದು ಆ ಬಗ್ಗೆ ಸೇತುವೆ ಸರ್ವೆಗೆ ಹಾಸನದಲ್ಲಿರುವ ಸಂಬಂಧಪಟ್ಟ ಕಚೇರಿಗೆ ತಿಳಿಸಲಾಗಿದೆ. ಸರ್ವೆ ಸದ್ಯದಲ್ಲೇ ನಡೆಯುವ ಭರವಸೆಯನ್ನೂ ವೆಂಕಟಯ್ಯ ವ್ಯಕ್ತಪಡಿಸಿದ್ದಾರೆ.

ಜಿಲ್ಲಾ ಕವಿಗೋಷ್ಠಿಗೆ ಆಹ್ವಾನ

ಚಿಕ್ಕಮಗಳೂರು ಜಿಲ್ಲಾ ಲೇಖಕರ ಸಂಘದ ಆಶ್ರಯದಲ್ಲಿ ನವೆಂಬರ್ ೨೧ ರಂದು ಜಿಲ್ಲಾ ಕವಿಗೋಷ್ಠಿಯನ್ನು ನರಸಿಂಹರಾಜಪುರದಲ್ಲಿ ನಡೆಸಲು ಉದ್ದೇಶಿಸಲಾಗಿದ್ದು, ಈ ಗೋಷ್ಠಿಯಲ್ಲಿ ಭಾಗವಹಿಸಲು ಇಚ್ಛಿಸುವ ಜಿಲ್ಲೆಯ ಕವಿಗಳು ಈ ತಿಂಗಳು ೩೧ ರ ಒಳಗಾಗಿ ಈ ಕೆಳಗೆ ಕಾಣಿಸಿದ ವಿಳಾಸಕ್ಕೆ ತಮ್ಮ ಸಮ್ಮತಿಯನ್ನು ತಿಳಿಸಬೇಕಾಗಿ ಕೋರಿದೆ: ಬಿ.ಎಸ್.ಜ್ವಾಲನಯ್ಯ, ಸಹಕಾರ್ಯದರ್ಶಿ, ಜಿಲ್ಲಾ ಲೇಖಕರ ಸಂಘ, ಅಗ್ರಹಾರ, ನರಸಿಂಹರಾಜಪುರ

ಜ್ಯೋತಿ ಮಹಿಳಾ ಸಮಾಜ

ಬೊಮ್ಮಲಾಪುರ : ಇಲ್ಲಿನ ಜ್ಯೋತಿ ಮಹಿಳಾ ಸಮಾಜದ ಉದ್ಘಾಟನೆಯನ್ನು ಪಂಚಾಯ್ತಿ ಅಧ್ಯಕ್ಷ ಶೇಷಪ್ಪ ನಾಯ್ಕರ ಅಧ್ಯಕ್ಷತೆಯಲ್ಲಿ ತಾ. ಅ. ಮಂ. ಉಪಾಧ್ಯಕ್ಷೆ ಸುಮಿತ್ರಾ ಅವರು ಈಚೆಗೆ ನೆರವೇರಿಸಿದರು. ತಹಸೀಲ್ದಾರ್ ಹೆಚ್. ಎಂ. ನಾಗಪ್ಪ ಮತ್ತು ಸಹಾಯಕ ಕೃಷಿ ನಿರ್ದೇಶಕ ಎಂ. ಎಸ್. ಸುಬ್ಬಯ್ಯ ಗೌಡ ಮುಖ್ಯ ಅತಿಥಿಗಳಾಗಿದ್ದರು. ಮನರಂಜನಾ ಕಾರ್ಯಕ್ರಮ ಮತ್ತು ಹೆಚ್. ಎಸ್. ಗೋಪಾಲ ಅವರಿಂದ ಲಘುಸಂಗೀತ ನಡೆದವು.

ಶ್ರೀಮತಿಯರಾದ ದಮಯಂತಿ ವೆಂಕಟೇಶ್, ಸುಶೀಲಾ ಪದ್ಮನಾಭ ಮಾತನಾಡಿದರು. ಗಂಗಾ ಭವಾನಿ ವಂದಿಸಿದರು.

ಶ್ರಮದಾನ

ಗಾಂಧಿಜಯಂತಿಯಂದು ಇಲ್ಲಿನ ಯುವಕ ಸ್ವಯಂಸೇವಕರು ಇಲ್ಲಿಂದ ಹರಿಹರಪುರಕ್ಕೆ ಹೋಗುವ ದಾರಿಯಲ್ಲಿ ಸೀತಾರಾಮಪುರದ ಬಳಿ ಶ್ರಮದಾನದ ಮೂಲಕ ರಿಪೇರಿಮಾಡಿದರು.

(ವರದಿ: ಕೆ. ಜಿ. ವೀರಪ್ಪ ಗೌಡ.)

ಹಿರೇಕೊಡಿಗೆಗೆ ಸದ್ಯವೇ ಕೆನರಾ ಬ್ಯಾಂಕ್ ಶಾಖೆ

ಕೊಪ್ಪ: ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಕೆನರಾ ಬ್ಯಾಂಕ್ ೫ ಶಾಖೆಗಳನ್ನು ಶೀಘ್ರದಲ್ಲೇ ತೆರೆಯಲಿದ್ದು, ಈ ತಾಲೂಕಿನ ಹಿರೇಕೊಡಿಗೆಯೂ ಅವುಗಳಲ್ಲೊಂದಾಗಿದೆ.

ನ. ರಾ. ಪುರ: ಇಲ್ಲಿ ನಡೆದ ರಾ. ಸ್ವ. ಸಂಘದ **ಪ್ರಾಥಮಿಕ ಶಿಕ್ಷಾ ವರ್ಗದ ಸಮಾರೋಪ ಸಮಾರಂಭ** ಅ. ೧೭ ರಂದು ಮಡಬೂರು ಪಂಚಾಯ್ತಿ ಅಧ್ಯಕ್ಷ ಕೆ. ಚನ್ನಪ್ಪ ಗೌಡರ ಅಧ್ಯಕ್ಷತೆಯಲ್ಲಿ ನಡೆಯಿತು. ಸಂಜೆ ೪ ಗಂಟೆಗೆ ಘೋಷ್ ಸಹಿತ ಪಥ ಸಂಚಲನವಿತ್ತು.

ಪತ್ರಕರ್ತನಿಗೆ ಕೊಲೆ ಬೆದರಿಕೆ?

ಉತ್ತಮೇಶ್ವರ: ಇಲ್ಲಿ ಪತ್ರಿಕಾ ಪ್ರತಿನಿಧಿಯಾಗಿರುವ ಎ.ವಿ. ರಾಮಮೂರ್ತಿಯವರಿಗೆ ಹೆಬ್ಬೆ ಕೊಲೆ ಪ್ರಕರಣದಲ್ಲಿ ಖುಲಾಸೆಯಾಗಿ ಬಂದಿರುವ ಟಿ. ಕೆ. ನಾರಾಯಣ ಕೊಲೆ ಬೆದರಿಕೆ ಹಾಕಿರುವುದಾಗಿ ಅವರು ಕೊಪ್ಪ ಪೋಲೀಸರು, ಎಸ್ಪಿ ಹಾಗೂ ಜಿಲ್ಲಾ ಪತ್ರಕರ್ತರ ಸಂಘಗಳಲ್ಲಿ ದೂರಿತ್ತಿದ್ದಾರೆ.

"ನಾರಾಯಣ ಬಂದಿದ್ದಾನೆ. ಇಲ್ಲೆ ಗಡಂಗಿನಲ್ಲಿದ್ದಾನೆ ಅಂತ ಪೇಪರಿಗೆ ಹಾಕಿಸು" ಎನ್ನುತ್ತ "ನನ್ನ ಬಗ್ಗೆ ಪೇಪರಿನಲ್ಲಿ ಬಹಳ ಬರೆದಿದ್ದೀಯಲ್ಲ. ಹೆಬ್ಬೆ ಕೃಷ್ಣಭಟ್ಟರ ಗತಿಯೇ ನಿನಗೂ ಆದೀತು" ಎಂದು ಆತ ಬೆದರಿಕೆ ಹಾಕಿದ್ದಾಗಿ ರಾಮಮೂರ್ತಿ ತಮ್ಮ ದೂರಿನಲ್ಲಿ ಹೇಳಿದ್ದಾರೆ.

ಕೂಲಿಯವನ ಮೇಲೆ ಮಾಲೀಕರ ಹಲ್ಲೆ: ಮೊಕದ್ದಮೆ

ಶೃಂಗೇರಿ: ಹೊಸತೋಟದ ಎಸ್. ಎಂ. ಭಿಡೆ ಯಾನೆ ಗೋಪಾಲರಾವ್ ಎಂಬವರು ತಮ್ಮಲ್ಲಿ ಕೆಲಸ ಮಾಡುವ ಹರಿಜನ ಪೈರ ಎಂಬಾತನ ಮೇಲೆ ಸೆ. ೨೪ ರಂದು ಹಲ್ಲೆ ನಡೆಸಿ ಕೂಡಿಹಾಕಿದ್ದಾಗಿ ಪೈರ ಕೊಟ್ಟ ದೂರಿನ ಮೇರೆಗೆ ಶೃಂಗೇರಿ ಪೋಲೀಸರು ಅವರ ಮೇಲೆ ಸೆಕ್ಷನ್ ೩೪೨ ಮತ್ತು ೩೨೩ ರ ರೀತ್ಯ (ಅಕ್ರಮ ಬಂಧನ,ಹಲ್ಲೆ) ಪ್ರಕರಣ ಕೋರ್ಟಿನಲ್ಲಿ ದಾಖಲಾಗಿರುವುದಾಗಿ ತಿಳಿದು ಬಂದಿದೆ.

ಅತ್ತಿಕೊಡಿಗೆ ಗ್ರಾಮ ಪಂಚಾಯ್ತಿಯಲ್ಲಿ ಬೇಗಾನೆ ಕಾರ್ಯಕ್ರಮ

ಬಿಕಾಲ್ ಕೊಪ್ಪ: ಅ. ೧೬ ರಂದು ಗ್ರಾಮೀಣ ಅಭಿವೃದ್ಧಿ ಮಂತ್ರಿ ಬೇಗಾನೆ ರಾಮಯ್ಯ ಈ ಗ್ರಾಮದಲ್ಲಿ ೨ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು.

ರಾ. ಗ್ರಾ. ಉ. ಯೋಜನೆಯಲ್ಲಿ ಕಲ್ಲುಗುಡ್ಡೆಯಲ್ಲಿ ಕಟ್ಟಿಸಿರುವ ಶಾಲಾ ಕೊಠಡಿಯನ್ನು ಬೆಳಿಗ್ಗೆ ಉದ್ಘಾಟಿಸಿದ ಅವರು ಮಧ್ಯಾಹ್ನ ಕವನಹಳ್ಳಿಯಲ್ಲಿ ಗ್ರಾಮಾಂತರ ನೀರು ಸರಬರಾಜು ಯೋಜನೆ ಹಾಗೂ ನೂತನ ಶಾಲಾ ಕೊಠಡಿಗಳನ್ನು ಉದ್ಘಾಟಿಸಿದರು. ಬಿ. ಜಿ. ಚಿದಂಬರ್ ಅಧ್ಯಕ್ಷತೆ ವಹಿಸಿದ್ದ ಈ ಕಾರ್ಯಕ್ರಮಗಳಲ್ಲಿ ಶಿವಮೊಗ್ಗ ಪಿ. ಡಬ್ಲ್ಯೂ. ಡಿ. ವಿಭಾಗದ ಎ. ಇಂಜಿನಿಯರ್ ಜಿ. ಮಲ್ಲಪ್ಪ ಹಾಗೂ ಸ್ಥಳೀಯ ಮುಖಂಡರುಗಳು ಮುಖ್ಯ ಅತಿಥಿಗಳಾಗಿದ್ದರು.

ಬೇಗಾರಿನಲ್ಲಿ ಗ್ರಾಮೀಣ ಅಭಿವೃದ್ಧಿ ಸಪ್ತಾಹ

ಬೇಗಾರು: ಅ. ೧೦ರಂದು ಇಲ್ಲಿ ಸವ್ಯಸೇ. ಸ. ಸಂಘದಲ್ಲಿ ಗ್ರಾಮೀಣ ಅಭಿವೃದ್ಧಿ ಸಪ್ತಾಹದ ಸಮಾರಂಭ ಸಂಘದ ಅಧ್ಯಕ್ಷ ಎ. ಎಂ. ಹೂವಪ್ಪ ಗೌಡರ ಅಧ್ಯಕ್ಷತೆಯಲ್ಲಿ ನಡೆಯಿತು. ತಾ. ಅ. ಮಂ. ಅಧ್ಯಕ್ಷ ಡಿ. ಕಳಸಪ್ಪ ಹೆಗ್ಡೆ, ಕ್ಷೇತ್ರಾಭಿವೃದ್ಧಿ ಅಧಿಕಾರಿ ಅನಂತಮೂರ್ತಿ, ತಹಸೀಲ್ದಾರ್ ಜಿ. ಅನಂತರಾವ್ ಭಾಗವಹಿಸಿದ್ದರು.

ಹಿರಿಮನೆ ಚಂದ್ರಶೇಖರ್ ಸ್ವಾಗತಿಸಿ, ಹೆಚ್.ಎಲ್.ದೇವಪ್ಪಗೌಡ ವಂದಿಸಿದರು.

ಕಾಂಪೋಸ್ಟ್ ಶಿಬಿರ

ಇಲ್ಲಿಗೆ ಸಮೀಪದ ಕೊರ್ಲ್ಲೈಲಿನಲ್ಲಿ ಅ. ೫ ರಂದು ಶೃಂಗೇರಿ ಕೃಷಿ ಇಲಾಖೆ ಕಾಂಪೋಸ್ಟ್ ಶಿಬಿರ ಏರ್ಪಡಿಸಿತ್ತು. ಡಿ. ಕಳಸಪ್ಪ ಹೆಗ್ಡೆ ಅಧ್ಯಕ್ಷತೆ ವಹಿಸಿದ್ದು, ಬಿ ಡಿ ಒ ಮತ್ತು ತಹಸೀಲ್ದಾರ್ ಮುಖ್ಯ ಅತಿಥಿಗಳಾಗಿದ್ದರು. ಶೃಂಗೇರಿ ತಾ॥ ಸಹಾಯಕ ಕೃಷಿ ನಿರ್ದೇಶಕ ಎಸ್. ಬಿ. ಮುದ್ದಲಿಂಗೇಗೌಡ ಕಾಂಪೋಸ್ಟ್ ಬಗ್ಗೆ ಮಾಹಿತಿ ನೀಡಿದರು.

ಬೇಗಾರು ಪಂಚಾಯ್ತಿ ಅಧ್ಯಕ್ಷ ಕೆ.ಟಿ. ಸಂಜೀವ ಗೌಡ ಸ್ವಾಗತಿಸಿ, ಎಸ್. ಸಿ. ರಾಮಪ್ಪನಾಯ್ಕ ವಂದಿಸಿದರು.

(ವರದಿ: ಎಸ್. ಕೆ. ಶೃಂಗೇಶ್ವರ)

ಕ್ರಾಂತಿ ರಂಗದ ಜಿಲ್ಲಾಧ್ಯಕ್ಷರಾಗಿ ಐ. ಬಿ. ಶಂಕರ್

ಚಿಕ್ಕಮಗಳೂರು: ಕ್ರಾಂತಿರಂಗದ ಅಧ್ಯಕ್ಷ ಅಬ್ದುಲ್ ನಜೀರ್ ಸಾಬ್ ಅವರು ಅ. ೧೭ ರಂದು ೧೯ ಜಿಲ್ಲಾ ಘಟಕಗಳಿಗೆ ಅಡ್ ಹಾಕ್ ಅಧ್ಯಕ್ಷರನ್ನು ನೇಮಕ ಮಾಡಿದ್ದು ಚಿಕ್ಕಮಗಳೂರು ಜಿಲ್ಲಾ ಅಧ್ಯಕ್ಷರಾಗಿ ಐ. ಬಿ. ಶಂಕರ್ ನೇಮಕಗೊಂಡಿದ್ದಾರೆ.

ಕೊಪ್ಪ ಸರ್ಕಲ್ ಇನ್ಸ್‌ಪೆಕ್ಟರ್ ಅಮಾನತು

ಕೊಪ್ಪ: ಇಲ್ಲಿನ ಪೋಲೀಸ್ ಸರ್ಕಲ್ ಇನ್ಸ್‌ಪೆಕ್ಟರ್ ಟಿ. ವಿ. ಹೊನ್ನಗಿರಿಯಪ್ಪ ಅವರನ್ನು ೧೦ ದಿನಗಳ ಕಾಲ ಅಮಾನತಿನಲ್ಲಿಡಲಾಗಿದೆಯೆಂದು ಜಿಲ್ಲಾ ಪೋಲೀಸ್ ಮುಖ್ಯಾಧಿಕಾರಿ ಎಸ್. ಎಸ್. ಮಸಳಿ ತಿಳಿಸಿದ್ದಾರೆ. ಅವರು ಇತ್ತೀಚೆಗೆ ನಡೆದ ಗ್ರಾಮ ಸಂಪರ್ಕ ಕಾರ್ಯಕ್ರಮದಲ್ಲಿ ಸರಿಯಾಗಿ ಕೆಲಸ ನಿರ್ವಹಿಸದಿದ್ದುದೇ ಅಮಾನತಿಗೆ ಕಾರಣವೆಂದಿದ್ದಾರೆ.

ಹಲ್ಲೆ ವರದಿ ಬಗ್ಗೆ ತನಿಖೆ

ಸರ್ಕಲ್ ಇನ್ಸ್‌ಪೆಕ್ಟರ್ ಮೇಲೆ ಪ್ರಭಾವಿ ಯುವಕರ ಗುಂಪೊಂದು ಠಾಣೆಯಲ್ಲೇ ಕೈ ಮಾಡಿತೆಂದು ಈ ಸುತ್ತಮುತ್ತೆಲ್ಲ ದಟ್ಟವಾಗಿ ಹಬ್ಬಿರುವ ವದಂತಿಗಳ ಬಗ್ಗೆ ಡಿವೈಎಸ್ ಪಿ ಯೊಬ್ಬರು ಇಲ್ಲಿಗೆ ಭೇಟಿ ಕೊಟ್ಟು ತನಿಖೆ ನಡೆಸಿದ್ದು, ಅದರ ವಿವರಗಳು ತಿಳಿದು ಬಂದಿಲ್ಲ. ಅವರು ಊರಿನ ಕೆಲವು ರಾಜಕೀಯ ಮುಖಂಡರ ಜೊತೆ ದೀರ್ಘವಾಗಿ ಚರ್ಚಿಸಿದ್ದು ಕಂಡುಬಂತು. 'ಮುಂಜಾವು' ಸಂಪಾದಕರನ್ನೂ ಸಮಾಲೋಚನೆಗಾಗಿ ಆಹ್ವಾನಿಸಿದ್ದರಾದರೂ ಠಾಣೆಯಲ್ಲಿ ಗಂಟೆಗಟ್ಟಲೆ ಕಾದು ಕೂರುವ ಅಗತ್ಯ ಸಂಪಾದಕರಿಗೆ ಇರಲಿಲ್ಲ, ಬಿಡುವೂ ಇರಲಿಲ್ಲ.

ಕೊಪ್ಪ ಪುರಸಭೆಯಲ್ಲಿ 'ಮುನ್ನಡೆ' ಯೋಜನೆ

ಕೊಪ್ಪ: ಪುರಸಭೆಗಳ ವ್ಯಾಪ್ತಿಯಲ್ಲಿ ಆರ್ಥಿಕವಾಗಿ ಹಿಂದುಳಿದವರಿಗೆ ಉದ್ಯಮಕ್ಕಾಗಿ ೧,೫೦೦ ರೂ. ಸಾಲ (ಅದರಲ್ಲಿ ೫೦೦ ರೂ. ಸಹಾಯ ಧನ) ಕೊಡುವ 'ಮುನ್ನಡೆ' ಯೋಜನೆಗಾಗಿ ಇಲ್ಲಿ ೧೧೫ ಜನರನ್ನು ಗುರುತಿಸಿದ್ದು, ಸಾಲ ಮಂಜೂರಾತಿಗಾಗಿ ಇಲ್ಲಿನ ೫ ಬ್ಯಾಂಕುಗಳಿಗೆ ಪಟ್ಟಿ ಒಪ್ಪಿಸಲಾಗಿದೆ.

ಪೋಲೀಸ್ ಬಂಧನಕ್ಕೆ ಹೆದರಿ ವಿಷ ಕುಡಿದ!

ಶೃಂಗೇರಿ: ನೆಮ್ಮಾರಿನ ಕುಖ್ಯಾತ ರೌಡಿ ನಾಗ ಎಂಬಾತನನ್ನು ಅ. ೧೧ ರಂದು ಶೃಂಗೇರಿ ಪೋಲೀಸರು ಬಂಧಿಸಲು ಹೋದಾಗ ಆತ ವಿಷ ಸೇವಿಸಿದ್ದು ಪ್ರಥಮ ಚಿಕಿತ್ಸೆ ಒದಗಿಸಿದ ಪೋಲೀಸರು ಆತನನ್ನು ಜಯಪುರದ ಆಸ್ಪತ್ರೆಗೆ ಸೇರಿಸಿ ಈಗ ಆತ ಗುಣಮುಖನಾಗುತ್ತಿದ್ದಾನೆನ್ನಲಾಗಿದೆ. ಆತ್ಮಹತ್ಯೆಯತ್ನಕ್ಕಾಗಿ ಇಂಡಿಯನ್ ಪೀನಲ್ ಕೋಡ್ ಸೆಕ್ಷನ್ ೩೦೯ ರ ಪ್ರಕಾರ ಮೊಕದ್ದಮೆ ದಾಖಲಾಗಿದೆ.

ಈತನನ್ನು ಸುತ್ತಮುತ್ತಲ ಶ್ರೀಮಂತರು ಸಾಕಿಟ್ಟಿದ್ದಾರೆಂದು ಹೇಳಲಾಗುತ್ತಿದೆ.

'ಮುಂಜಾವು'ಗೆ

ಚಂದಾದಾರರಾಗಿರಿ

ಓದುಗರ ಪತ್ರಗಳು

'ಮುಂಜಾವು' ಸಂಪಾದಕರಲ್ಲಿ,

ಗಣಪತಿ ಜಲಸಮಾಧಿ: "ಸತ್ಯಸಂಗತಿ ಇದು"

ಮಾನ್ಯರೆ,

ನಿಮ್ಮ ೧೦-೧೦-೮೨ ರ ಪತ್ರಿಕೆಯಲ್ಲಿ ಮಂಡಲ ಗಣಪತಿಯ ಬಗ್ಗೆ ಬರೆದ ವಿಚಾರದಲ್ಲಿ ಸತ್ಯಾಂಶವಿಲ್ಲವೆಂದು ತಿಳಿಸಲು ಇಚ್ಛಪಡುತ್ತೇನೆ.

ನಡೆದ ಸಂಗತಿ ಏನೆಂದರೆ, ದೇವಸ್ಥಾನದಿಂದ ನಮ್ಮ ಮನೆಗೆ ಬರುತ್ತಿದ್ದ ಕುಡಿಯುವ ನೀರಿನ ಕಾಲುವೆಯನ್ನು ನಮಗೆ ತಿಳಿಸದೆ ಮುಚ್ಚಿದ್ದರು. ನಾವು ಅದನ್ನು ಪುನಃ ಬಿಡಿಸಿದ್ದೆವು. ಆ ಸಮಯದಲ್ಲಿ ಯಾರೋ ದುಷ್ಕರ್ಮಿಗಳು ಕಾಲುವೆಗೆ ಮಣ್ಣು ಹಾಕಿ ಸ್ವಲ್ಪ ನೀರು ನಿಲ್ಲುವಂತೆ ಮಾಡಿದ್ದರು. ಅದನ್ನು ಗಮನಿಸಿದ ನಾವು ತಕ್ಷಣ ಮಣ್ಣನ್ನು ತೆಗೆದು ನೀರನ್ನು ಖಾಲಿ ಮಾಡಿರುತ್ತೇವೆ.

ಈ ರೀತಿ ಸುಳ್ಳು ಸುದ್ದಿ ಹರಡಲು ಮತ್ತು ಪರಿಸ್ಥಿತಿ ಗಂಭೀರವಾಗಲು ದೇವಸ್ಥಾನದ ಕನ್ವೀನರ್ ಎನ್ನಿಸಿಕೊಂಡವರ ಸಣ್ಣತನದ ರಾಜಕೀಯ ಹಾಗೂ ಕುತಂತ್ರವೇ ಕಾರಣ ಎಂದು ತಿಳಿಸಲು ವಿಷಾದವಾಗುತ್ತದೆ. ಅವರು ಸಮಯಕ್ಕೆ ತಕ್ಕಂತೆ ವರ್ತಿಸಿದ್ದರೆ ಸಮಸ್ಯೆಯನ್ನು ಸುಲಭವಾಗಿ ಬಗೆಹರಿಸ ಬಹುದಿತ್ತು.

—ಹೆಚ್. ಎಸ್. ಕಳಸಪ್ಪ,
ಹೊಸಮನೆ, ಕೆಸವೆ.

ವಂಚಿತ ಮನರಂಜನೆ

ಸ್ವಾಮಿ,

ಈ ಮೂಲಕ ತಮಗೆ ತಿಳಿಯಪಡಿಸುವುದೇನೆಂದರೆ ಕೊಪ್ಪ ಜೆ. ಎಂ. ಜೆ. ಥಿಯೇಟರಿಗೆ ಮನಸ್ಸಿಗೆ ಉಲ್ಲಾಸ ತರುವ ಅಥವ ಮನರಂಜನೆಗಾಗಿ ಚಿತ್ರ ನೋಡಲು ಹೋದರೆ ಅಲ್ಲಿ ಕುಳಿತುಕೊಳ್ಳುವ ಸೀಟುಗಳು ಹರಿದುಹೋಗಿದ್ದು ಮನರಂಜನೆಗೆಂದು ಹೋದ ನಮಗೆ ಪ್ಯಾಂಟ್ ಅಥವ ಬಟ್ಟೆ ಹರಿದುಹೋಗಿ ಮನಸ್ಸಿಗೆ ನೋವಾಗುವ ಪರಿಸ್ಥಿತಿಗೆ ಬರುತ್ತೇವೆ. ಇದರಿಂದ ಚಿತ್ರ ನೋಡುವ ವೇಳೆಯಲ್ಲಿ ಸೀಟಿನ ಬಗ್ಗೆ ಯೋಚಿಸುವಂತೆ ಆಗುತ್ತದೆ. ದಯಮಾಡಿ ಜೆ. ಎಂ. ಜೆ. ಚಿತ್ರಮಂದಿರದ ವ್ಯವಸ್ಥಾಪಕರು ಚಿತ್ರಮಂದಿರದ ಈ ಸೀಟುಗಳನ್ನು ಸರಿಪಡಿಸುವುದರ ಮೂಲಕ ಚಿತ್ರರಸಿಕರಿಗೆ ಹಣಕ್ಕೆ ತಕ್ಕ ಪ್ರತಿಫಲ ಕೊಡುವಿರಾಗಿ ನಂಬಿರುತ್ತೇನೆ.

-ಹೆಚ್.ಟಿ. ಕೃಷ್ಣಮೂರ್ತಿ,
ಹಿರೇಕೊಡಿಗೆ.

ಬಡವರಿಗೆ ಕೊಟ್ಟ ಹಂಚು, ಚಪ್ಪಡಿ ಶ್ರೀಮಂತರ ಮನೆಗೆ ಬಳಕೆ

ಜಿಲ್ಲಾ ಪಶುಸಂಗೋಪನ ಇಲಾಖೆ ವತಿಯಿಂದ ಸ್ಪೆಶಲ್ ಕಾಂಪೊನೆಂಟ್ ಯೋಜನೆಯಂತೆ ಹರಿಜನ-ಗಿರಿಜನರಿಗೆ ಕೊಟ್ಟಿರುವ ಹಸುಗಳಿಗಾಗಿ ಕೊಟ್ಟಿಗೆ ಕಟ್ಟಿಕೊಳ್ಳಲು ಹಂಚು ಮತ್ತು ಚಪ್ಪಡಿ ಕೊಟ್ಟಿರುವುದು ಸರಿಯಷ್ಟೆ. ಗುಣವಂತೆಯ ಶಿವಾನಂದ ಯುವಕಸಂಘದ ಅಧ್ಯಕ್ಷ ಡಿ. ನಾಗರಾಜ ಮತ್ತು ಅವರ ತಂದೆ ಕೆ. ಎಸ್. ಧರ್ಮೇಗೌಡರು ತಮ್ಮಲ್ಲಿ ಕೂಲಿ ಕೆಲಸ ಮಾಡುವ ಬಡವರಿಗೆ ಬಂದ ಸೌಲತ್ತನ್ನು ತಾವು ಗಾಡಿಯಲ್ಲಿ ಕಳಿಸಿಕೊಡುವುದಾಗಿ ಹೇಳಿ ತಮ್ಮ ಕಾಂಪೌಂಡಿನಲ್ಲೇ ಇಳಿಸಿಕೊಂಡು ತಮ್ಮ ಮನೆಯ ಉಪಯೋಗಕ್ಕೆ ಬಳಸಿಕೊಳ್ಳುತ್ತಿದ್ದಾರೆ. ಇಲಾಖೆಯವರು ಕೂಡಲೇ ಸ್ಥಳಕ್ಕೆ ಬಂದು ಪರಿಶೀಲಿಸಿ ಈ ಬಡವರಿಗೆ ಬಂದ ಸವಲತ್ತನ್ನು ಅವರಿಗೆ ಕೊಡಿಸಿ, ಅನ್ಯಾಯ ಮಾಡಿದ ಮೇಲ್ಕಂಡ ಜನರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗಿ ಕೇಳಿ ಕೊಳ್ಳುತ್ತೇನೆ.

—ಜಿ. ಎಸ್. ನಾಗೇಶ, ಗುಣವಂತೆ.
(ಸಂಘದ ಮಾಜಿ ಕಾರ್ಯದರ್ಶಿ.)

ಭೂಮಿ ಮಂಜೂರು ಭರವಸೆ

ನಮ್ಮ ಸಂಘದ ಸದಸ್ಯರಲ್ಲಿ ಕೆಲವರು ಶೇಡ್ಗಾರ್ ಗ್ರಾಮ ಪಂಚಾಯ್ತಿಯ ಅಂಗಳಗುಡಿಗೆ ಗ್ರಾಮದ ಸರ್ವೆ ನಂ. ೧೩ ರಲ್ಲಿ ದರಖಾಸ್ತು ಅರ್ಜಿ ಸಲ್ಲಿಸಿದ್ದು ಅ. ೯ ರಂದು ತೀರ್ಥಹಳ್ಳಿ ಕ್ಷೇತ್ರದ ಶಾಸಕರಾದ ಕಡಿದಾಳ್ ದಿವಾಕರ್ ಮತ್ತು ತೀರ್ಥಹಳ್ಳಿ ತಾಲ್ಲೂಕು ಅಭಿವೃದ್ಧಿ ಮಂಡಳಿ ಅಧ್ಯಕ್ಷರಾದ ಹೆಚ್. ಹೆಚ್. ಮಂಜಪ್ಪಗೌಡರು ಸ್ಥಳಕ್ಕೆ ಭೇಟಿಕೊಟ್ಟು ಬಡಕೂಲಿಗಾರರ ಪರಿಸ್ಥಿತಿಯನ್ನು ಮನಗಂಡು ಅವರು ಸಾಗುವಳಿ ಮಾಡುತ್ತಿರುವ ಜಮೀನನ್ನು ಮಂಜೂರು ಮಾಡಿಸಲು ಪ್ರಯತ್ನಿಸುವುದಾಗಿ ಭರವಸೆಯಿತ್ತಿದ್ದಾರೆ.

-ಜಿ.ಬಿ. ಕೃಷ್ಣಪೂಜಾರಿ,
ಕಾರ್ಯದರ್ಶಿ, ತೀರ್ಥಹಳ್ಳಿ ತಾಲ್ಲೂಕು
ಕೃಷಿ ಮತ್ತು ಇತರ ಕೂಲಿಗಾರರ ಸಂಘ
ಗಣಪತಿ ಕಟ್ಟೆ, ಕಟ್ಟೆಹಕ್ಲು ಪೋಸ್ಟ್

'ರಸ್ತೆ ದಿಬ್ಬ' ಹಾಕಿಸಿ

ಕೊಪ್ಪ–ತೀರ್ಥಹಳ್ಳಿ ಮಾರ್ಗದಲ್ಲಿರುವ ಗಡಿಕಲ್ಲಿನ ಹಿರಿಯ ಪ್ರಾಥಮಿಕ ಶಾಲೆ ಮತ್ತು ಆ ಶಾಲೆಯಲ್ಲಿ ನಡೆಯುವ ಶಿಶುವಿಹಾರಕ್ಕೆ ಕಾಂಪೌಂಡ್ ಇರುವುದು ಮುಖ್ಯ ರಸ್ತೆಗೆ ೧೦-೧೫ ಅಡಿಗಳಷ್ಟು ಅಂತರದಲ್ಲಿ. ಈ ರಸ್ತೆಯಲ್ಲಿ ದಿನಂಪ್ರತಿ ನೂರಾರು ೩೦-೩೨ ಬಸ್ಸುಗಳು ಹಾಗೂ ನೂರಾರು ಇತರೆ ವಾಹನಗಳು ತಿರುಗುತ್ತಿದ್ದು, ಈ ಊರಿನಲ್ಲಿ ವೇಗಕ್ಕೆ "ವಿಲೇಜ್ ಲಿಮಿಟ್" ಎಂದು ಯಾವ ಪ್ರತಿಬಂಧವೂ ಇಲ್ಲ. ಆದುದರಿಂದ ಚಾಲಕರು ತಮಗಿಷ್ಟಬಂದ ವೇಗದಲ್ಲಿ ವಾಹನಗಳನ್ನು ನಡೆಸುತ್ತಾರೆ. ಈ ಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳ ಹಿತದೃಷ್ಟಿಯಿಂದ ಸಂಬಂಧಪಟ್ಟವರು ಇತ್ತ ಕಡೆ ಗಮನಹರಿಸಿ ಶಾಲೆಯ ಸಮೀಪದಲ್ಲಿ ವಾಹನಗಳ ವೇಗ ತಗ್ಗಿಸಲು ಎರಡು "ರಸ್ತೆ ದಿಬ್ಬ"ಗಳನ್ನು ನಿರ್ಮಿಸಿ "ಆಕಸ್ಮಿಕ" ಎಂದು ಆಗುವ ಅನಾಹುತಗಳನ್ನು ತಪ್ಪಿಸಬೇಕಾಗಿ ಕೇಳಿಕೊಳ್ಳುತ್ತೇನೆ. ಈ ಬಗ್ಗೆ ಈ ಹಿಂದೆ ಕೊಪ್ಪ ಲೋಕೋಪಯೋಗಿ ಇಲಾಖೆಯವರಿಗೆ ಬರೆದಿದ್ದೆವು. ಆದರೇನೂ ಉಪಯೋಗ ಕಾಣಲಿಲ್ಲ. "ಮುಂಜಾವು" ಪತ್ರಿಕೆ ಮೂಲಕವಾದರೂ ಸಂಬಂಧಪಟ್ಟವರ ಗಮನಕ್ಕೆ ಬಂದು ಆಗುವ ಅನಾಹುತಗಳಿಗೆ ಜಾಗ್ರತರಾಗಲು ಕೋರುತ್ತೇನೆ.

—ಹೊಸ್ಮನೆ ರಮೇಶ್, ಗಡಿಕಲ್.

"ಹಲ್ಲೆ ಮಾಡಿದವರೇ ದೂರು ಕೊಟ್ಟಿದ್ದಾರೆ"

ಸ್ವಾಮಿ,

ದಿ. ೨-೧೦-೮೨ ರ ನಿಮ್ಮ ಪತ್ರಿಕೆಯಲ್ಲಿನ "ಹಲ್ಲೆ:ಠಾಣೆಗೆ ದೂರು" ಎಂಬ ವರದಿಗೆ ನನ್ನ ಉತ್ತರ ಇದು.

ಹಳೇಮಠದ ಬಡ ಕುಟುಂಬಕ್ಕೆ ನಾನು ಕಿರುಕುಳ ಕೊಟ್ಟಿಲ್ಲ; ಬೆದರಿಕೆಹಾಕಿಲ್ಲ. ಅವರ ಜಮೀನು ಕಬಳಿಸುವ ಪ್ರಯತ್ನ ಮಾಡಿಲ್ಲ. ಅವರ ಏಳಿಗೆಗಾಗಿ ನಾನು ಕೊಟ್ಟಿರುವ ಸಹಕಾರ ಅಷ್ಟಿಷ್ಟಲ್ಲ. ನಾನು ಇರುವವನು ಒಬ್ಬ. ಅವರು ೮-೯ ಜನ ಇದ್ದಾರೆ. ಅವರೆಲ್ಲ ಸೇರಿ ನನಗೆ ಕೊಟ್ಟಿರುವ ತೊಂದರೆಯನ್ನೆಲ್ಲಾ ನಾನು ಸೈರಿಸಿ ಕೊಂಡಿದ್ದೇನೆ.

ದಿ. ೧-೧೦-೮೨ರಂದು ನನ್ನ ಗದ್ದೆಯಲ್ಲಿ ಅನೇಕ ಕಡೆ ಅಂಚು ತೆಗೆದು ಬಲಾತ್ಕಾರವಾಗಿ ನೀರು ತೆಗೆದು ಕೊಂಡಿದ್ದನ್ನು ನೋಡಲು ಹೋದ ನನಗೆ ಇವರು ಐದಾರು ಜನ ತಾಯಿ ಮಕ್ಕಳು ಸೇರಿ ನನ್ನನ್ನು ಥಳಿಸಿದ್ದಲ್ಲದೆ, ತಾವೇ ರಕ್ಷಣೆ ಕೋರಿ ಅಧಿಕಾರಿಗಳಿಗೆ ದೂರು ಕೊಟ್ಟಿದ್ದಾರೆ.

ಅವರ ಜಮೀನು ಬೇರೆಯವರು ಕೊಳ್ಳದಂತೆ ಮಾಡಿ, ಅವರು ನರಳಿ ನರಳಿ ಸಾಯಬೇಕೆಂದು ನಾನು ಹೇಳಿಲ್ಲ.

ಅವರು ಅನೇಕ ಸಲ ಪಂಚಾಯಿತಿ ಏರ್ಪಡಿಸಿ ಅದರಂತೆ ನಡೆಯದೆ ಹೋಗಿರುತ್ತಾರೆ. ಕಳೆದ ಸಲ ಬಿ. ಜಿ. ಚಿದಂಬರ ಗೌಡರು ಹೊನಗೋಡು ಶೃಂಗೇಶ್ವರ ಭಟ್ಟರು, ಎಕ್ಕಿ. ರಾಮಯ್ಯ, ಹೊಸಳ್ಳಿ ರಾಮಕೃಷ್ಣಯ್ಯ ಮುಂತಾದ ಪಂಚಾಯತರು ಕೊಟ್ಟ ತೀರ್ಮಾನವನ್ನೂ ಮುರಿದಿದ್ದಾರೆ. ಅಲ್ಲದೆ ಯಂತ್ರ, ಮಂತ್ರ, ತಂತ್ರವನ್ನೂ ಬಲ್ಲ ಚಾಣಾಕ್ಷರು ಇವರು. ನಮಗೂ ಊರಿನವರಿಗೂ ಕೊಡುತ್ತಿರುವ ತೊಂದರೆ ಊರಿನವರಿಗೂ ತಿಳಿದಿದೆ.

—ವಿ. ಬಿ. ವೆಂಕಟಯ್ಯ ಗೌಡ,
ಹಳೇಮಠ, ಹೊಸಕೊಪ್ಪ ಅಂಚೆ.

ಏಳನೇ ತರಗತಿ ಮೆರಿಟ್ ಪರೀಕ್ಷೆಯಲ್ಲಿ ಸೀತೂರು ಹಿ। ಪ್ರಾ। ಶಾಲೆಗೆ ಪ್ರಥಮ ರ್‍ಯಾಂಕ್

ಸೀತೂರು: ಇಲ್ಲಿನ ಹಿ। ಪ್ರಾ। ಶಾಲೆಯ ಕುಮಾರಿ ಎಚ್. ವಿ. ಸಾವಿತ್ರಿ ಎಂಬ ವಿದ್ಯಾರ್ಥಿನಿಯು ಚಿಕ್ಕಮಗಳೂರು ಜಿಲ್ಲಾ ಮಟ್ಟದ ಮೆರಿಟ್ ಪರೀಕ್ಷೆಯಲ್ಲಿ ಪ್ರಥಮ ರ್‍ಯಾಂಕ್ ಪಡೆದಿದ್ದಾಳೆ.

ಶಾಲಾ ಮುಖ್ಯೋಪಾಧ್ಯಾಯ ಬಿ.ಪಿ. ರಾಜಪ್ಪ ಈ ಬಗ್ಗೆ ತಮ್ಮ ಸಂತಸವನ್ನು ವ್ಯಕ್ತಪಡಿಸಿ ಶಾಲೆಗೆ ಕೀರ್ತಿ ತಂದ ವಿದ್ಯಾರ್ಥಿನಿಯನ್ನು ಅಭಿನಂದಿಸಿದ್ದಾರೆ.

ಕಿಗ್ಗಕ್ಕೆ ಶಿವಶಂಕರ್ ಬಸ್ ಓಡಿಸಲು ಕೋರಿಕೆ

ಕಿಗ್ಗ: ಹಾಲಿ ಶೃಂಗೇರಿವರೆಗೆ ಮಧ್ಯಾಹ್ನ ಬರುತ್ತಿರುವ ಶಿವಶಂಕರ್ ಕಂಪನಿಯ ಬಸ್ಸನ್ನು ಮಧ್ಯಾಹ್ನ ೩ ಗಂಟೆಗೆ ಕಿಗ್ಗಕ್ಕೆ ಓಡಿಸಲು ಪರವಾನಗಿ ಕೊಡುವಂತೆ ಇದೇ ಸೆ. ೨೭ ರಂದು ನಡೆದ ಮರ್ಕಲ್ ಗ್ರಾಮ ಪಂಚಾಯ್ತಿ ಸಭೆ ಚಿಕ್ಕಮಗಳೂರಿನ ಪ್ರಾದೇಶಿಕ ಸಾರಿಗೆ ಅಧಿಕಾರಿಯವರನ್ನು ಒತ್ತಾಯಿಸಿದೆ.

ಹಿಂದೆ ಅದೇ ಹೊತ್ತಿಗೆ ಬರುತ್ತಿದ್ದ ಉದಯ ಬಸ್ ನಿಂತುಹೋದ ಮೇಲೆ ಗ್ರಾಮಾಂತರದ ಮೂಲೆಯಾದ ಈ ಭಾಗದ ಜನರಿಗೆ ವಿಪರೀತ ಅನಾನುಕೂಲವಾಗಿದೆಯೆಂದು ಹೇಳಲಾಗಿದೆ.

ಹೆಸರು ಬದಲಾವಣೆ

ಕೊಪ್ಪ ಪ್ರ. ದ. ಕಾಲೇಜು ಪ್ರಥಮ ಬಿ. ಕಾಂ. ವಿದ್ಯಾರ್ಥಿಯಾದ ನಾನು ದಿ. ೬-೧೦-೮೨ ರಂದು ನ. ರಾ. ಪುರ ಕೋರ್ಟು ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿರುವಂತೆ ನನ್ನ ಹೆಸರು ಕೆ. ಜಿ. ರುದ್ರಯ್ಯ S/o ಕೆ. ದುಗ್ಗಪ್ಪಗೌಡ ಎಂಬುದರ ಬದಲು ಕೆ. ಗಣಪತಿ s/o. ಕೆ. ದುಗ್ಗಪ್ಪಗೌಡ ಎಂದು ಬದಲಾಯಿಸಿ ಕೊಂಡಿರುತ್ತೇನೆ.

(ಸಹಿ)ಕೆ. ಜಿ. ರುದ್ರಯ್ಯ

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ:
ಸಿರಿಮನೆ ನಾಗರಾಜ್.
ಅಚ್ಚು: ದೀಪಟಿಗೆ ಅಚ್ಚುಕೂಟ, ಕೊಪ್ಪ.